ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ಇವರು ಶೂನ್ಯ ವೇಳೆಯ ಪ್ರಸ್ತಾಪಿಸಿರುವ ಕ್ರಮ ಸಂಖ್ಯೆ 08 ರ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಯವರ ಉತ್ತರ.

*****

ಸೂಚನೆ:

ದಿನಾಂಕ:7.2.2023ರ ವಿಜಯವಾಣಿ ಪತ್ರಿಕೆಯಲ್ಲಿ ಇನ್ನೂ ಸಿಗದ ರೇಷನ್ ಕಾರ್ಡ್- 50983 ಅರ್ಜಿ ಬಾಕಿ- ವಿವಿಧ ಕಾರಣಕ್ಕೆ 6254 ಅರ್ಜಿ ತಿರಸ್ಕಾರ-ಹೊಸ ಬಿಪಿಎಲ್ ಕಾರ್ಡ್‌ಗಾಗಿ ರಾಜಧಾನಿ ಜನತೆ ಅರ್ಜಿ ಸಲ್ಲಿಸಿ 2-3 ವರ್ಷ ಕಳೆದರೂ ಬಿಪಿಎಲ್ ಕಾರ್ಡ್ ಸಿಗದೆ ಪರದಾಡುವ ಸ್ಥಿತಿ ನಿರ್ಮಾಣವಾಗಿರುವ ಬಗ್ಗೆ ವರದಿ ಪ್ರಕಟವಾಗಿರುತ್ತದೆ.

2021-22ನೇ ಸಾಲಿನಿಂದ ಈವರೆಗೆ ಪೂರ್ವ ಭಾಗದಲ್ಲಿ 6,558, ಉತ್ತರದಲ್ಲಿ 6,976, ದಕ್ಷಿಣದಲ್ಲಿ 5706, ಪಶ್ಚಿಮದಲ್ಲಿ 10,738 ಹಾಗೂ ಬೆಂಗಳೂರು ನಗರ ವಿಭಾಗದಲ್ಲಿ 21,005 ಸೇರಿ ಒಟ್ಟು 50,983 ಅರ್ಜಿಗಳು ಬಾಕಿ ಉಳಿದಿವೆ. ಸರ್ವರ್ ಡೌನ್ ಸೇರಿ ಇತರೆ ಸಮಸ್ಯೆಗಳಿಂದ ರೇಷನ್ ಕಾರ್ಡ್ ಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಲೇವಾರಿಗೆ ಆಹಾರ ಇಲಾಖೆ ಅಧಿಕಾರಿಗಳು ಹೆಣಗಾಡುವಂತಾಗಿದೆ. ಅಲ್ಲದೆ, ಅರ್ಜಿದಾರರು ಪ್ರತಿ ನಿತ್ಯ ಇಲಾಖೆ ಕಛೇರಿಗಳಿಗೆ ಅಲೆದಾಡುವಂತಾಗಿದೆ. ಕರೋನಾ ಸಂಧರ್ಭದಲ್ಲಿ ಒಂದು ವರ್ಷ ರೇಷನ್ ಕಾರ್ಡ್ ನೀಡುವ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ನಂತರ, ಹಲವು ವರ್ಷಗಳಿಂದ ಬಾಕಿ ಉಳಿದಿರುವ ಅರ್ಜಿಗಳ ವಿಲೇಗೆ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಅದರಂತೆ, ಪ್ರತಿ ತಿಂಗಳು ಒಂದರಿಂದ 14ನೇ ತಾರೀಖಿನವರೆಗೆ ಅರ್ಜಿಗಳ ವಿಲೇ ಪ್ರಕ್ರಿಯೆ ನಡೆಯುತ್ತಿದ್ದರೂ ಹೇಳಿಕೊಳ್ಳುವಷ್ಟು ಆಗುತ್ತಿಲ್ಲ. ಇದರಿಂದ ಸಾವಿರಾರು ಅರ್ಜಿದಾರರು ಸಂಕಷ್ಟ ಅನುಭವಿಸುವಂತಾಗಿರುವುದು ಕಂಡು ಬಂದಿರುತ್ತದೆ.

ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ಕುಟುಂಬದವರಿಗೆ ವಿನಾಯಿತಿ ನೀಡಲಾಗಿದ್ದು, ಇಂತವರಿಗೆ ತುರ್ತಾಗಿ ರೇಷನ್ ಕಾರ್ಡ್ ನೀಡಬೇಕೆಂದು ಆಹಾರ ನಿರೀಕ್ಷಕರಿಗೆ ಇಲಾಖೆ ಸೂಚಿಸಿದೆ. ಆದರೆ, ಇಲಾಖೆಯ ಕಛೇರಿಗಳಿಗೆ ಪ್ರತಿ ತಿಂಗಳು ಇಂಥ ಸಾವಿರಾರು ಅರ್ಜಿಗಳು ಸಲ್ಲಿಕೆಯಾದರು ಆಹಾರ ನಿರೀಕ್ಷಕರು ವಿಲೇವಾರಿ ಮಾಡುತ್ತಿಲ್ಲ. ಹೃದಯ ಸಂಬಂಧಿ ಕಾಯಿಲೆಯಿಂದ ಕುಟುಂಬದ ಸದಸ್ಯರೊಬ್ಬರು ಬಳಲುತ್ತಿದ್ದಾರೆ. ಬಿಪಿಎಲ್ ಕಾರ್ಡ್ ಇದ್ದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಸೇರಿ ಇತರ ಸೌಲಭ್ಯಗಳು ಸಿಗಲಿವೆ. ಆದರೆ, ಅರ್ಜಿ ಸಲ್ಲಿಸಿ ವರ್ಷವಾದರೂ ಕಾರ್ಡ್ ಬಂದಿಲ್ಲ ಎಂದು ಅರ್ಜಿದಾರರು ಅಳಲು ತೋಡಿಕೊಳ್ಳುತ್ತಿರುವುದು ನೋವಿನ ಸಂಗತಿಯಾಗಿರುತ್ತದೆ.

ದಯಾಮಾಡಿ ಸರ್ಕಾರ ಕೂಡಲೇ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಿ ಬಾಕಿ ಉಳಿದಿರುವ ಅರ್ಜಿಗಳನ್ನು ಪುರಸ್ಕರಿಸಿ ಬಿಪಿಎಲ್ ಕಾರ್ಡ್ ಗಳನ್ನು ನಿಗದಿತ ಕಾಲಾವಧಿಯೊಳಗೆ ಮಂಜೂರು ಮಾಡಲು ಕ್ರಮ ಕೈಗೊಳ್ಳಬೇಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

ಉತ್ತರ:

ರಾಜ್ಯದಲ್ಲಿ 2021ನೇ ಸಾಲಿನಿಂದ ಇದುವರೆಗೂ ಆದ್ಯತಾ ಪಡಿತರ ಚೀಟಿಯನ್ನು ಕೋರಿ ಸಲ್ಲಿಸಿರುವ ಅರ್ಜಿಗಳು, ವಿತರಿಸಲಾದ ಪಡಿತರ ಚೀಟಿಗಳು, ವಿಲೇ ಮಾಡಲಾದ ಅರ್ಜಿಗಳ ಹಾಗೂ ಬಾಕಿ ಇರುವ ಅರ್ಜಿಗಳ ವಿವರ ಈ ಕೆಳಕಂಡಂತಿದೆ.

| ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಅನುಮೋದಿಸಿರುವ ಅರ್ಜಿಗಳ ಸಂಖ್ಯೆ | ತಿರಸ್ಕೃತವಾದ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|
| 8,23,534 | 3,45,030 | 1,73,640 | 3,04,864 |

ಬೆಂಗಳೂರು ನಗರದ ಅನೌಪಚಾರಿಕ ಪಡಿತರ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ 2021ನೇ ಸಾಲಿನಿಂದ ಇದುವರೆಗೂ ಆದ್ಯತಾ ಪಡಿತರ ಚೀಟಿಯನ್ನು ಕೋರಿ ಸಲ್ಲಿಸಿರುವ ಅರ್ಜಿಗಳು, ವಿತರಿಸಲಾದ ಪಡಿತರ ಚೀಟಿಗಳು, ವಿಲೇ ಮಾಡಲಾದ ಅರ್ಜಿಗಳ ಹಾಗೂ ಬಾಕಿ ಇರುವ ಅರ್ಜಿಗಳ ವಿವರ ಈ ಕೆಳಕಂಡಂತಿದೆ.

| ವಲಯಗಳು | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಅನುಮೋದಿಸಿರುವ ಅರ್ಜಿಗಳ ಸಂಖ್ಯೆ | ತಿರಸ್ಕೃತವಾದ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|
| ಬೆಂಗಳೂರು ನಗರ ಜಿಲ್ಲೆ | 40026 | 16138 | 4398 | 19490 |
| ಬೆಂಗಳೂರು ಪೂರ್ವ ವಲಯ | 13076 | 7508 | 351 | 5217 |
| ಬೆಂಗಳೂರು ಉತ್ತರ ವಲಯ | 13728 | 7982 | 1036 | 4710 |
| ಬೆಂಗಳೂರು ದಕ್ಷಿಣ ವಲಯ | 12685 | 6874 | 1218 | 4593 |
| ಬೆಂಗಳೂರು ಪಶ್ಚಿಮ ವಲಯ | 20041 | 10103 | 596 | 9342 |

2021-22ನೇ ಸಾಲಿನಲ್ಲಿ ಆದ್ಯತಾ ಪಡಿತರ ಚೀಟಿಯನ್ನು ಕೋರಿ ಅರ್ಜಿ ಸಲ್ಲಿಸಿದ 2,76,459 ಅರ್ಹ ಕುಟುಂಬಗಳಿಗೆ ಪಡಿತರ ಚೀಟಿಯನ್ನು ವಿತರಿಸಲಾಗಿದೆ. 2022-23ನೇ ಸಾಲಿನಲ್ಲಿ 1,55,927 ಅರ್ಹ ಕುಟುಂಬಗಳಿಗೆ ಪಡಿತರ ಚೀಟಿಯನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ.

ಸರ್ಕಾರದ ಮಾನದಂಡಗಳನ್ವಯ ಪಡಿತರ ಚೀಟಿ ವಿತರಿಸುವ ಮುನ್ನ ಅರ್ಜಿದಾರರು ಸಲ್ಲಿಸಿರುವ ಮಾಹಿತಿಯ ಸತ್ಯಾಸತ್ಯತೆಗಳನ್ನು ಪರಿಶೀಲಿಸುವುದು ಅಗತ್ಯವಾಗಿರುತ್ತದೆ. ಇದರಿಂದಾಗಿ ಅನರ್ಹರು ಆದ್ಯತಾ ಪಡಿತರ ಚೀಟಿಯನ್ನು ಪಡೆಯುವುದನ್ನು ತಡೆಹಿಡಿಯಲು ಅನುಕೂಲವಾಗಿರುತ್ತದೆ. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಹಾರ ತಂತ್ರಾಂಶದಲ್ಲಿ ಪಡಿತರ ಚೀಟಿಯನ್ನು ಕೋರಿ ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ಮೇರೆಗೆ (FIFO) ಅರ್ಜಿಯ ಹಿರಿತನದ ಮೇಲೆ ಪಡಿತರ ಚೀಟಿಯನ್ನು ಪಡೆಯುವ ಅರ್ಹತೆ ಬಗ್ಗೆ ಪರಿಶೀಲಿಸಿ, ಅರ್ಹ ಅರ್ಜಿದಾರರಿಗೆ ಪಡಿತರ ಚೀಟಿ ವಿತರಿಸುವ ಕಾರ್ಯ ಚಾಲ್ತಿಯಲ್ಲಿರುತ್ತದೆ. ಆದ್ಯತಾ ಪಡಿತರ ಚೀಟಿ ಕೋರಿ ಪ್ರತಿದಿನ ಸರಾಸರಿ 2000 ಅರ್ಜಿಗಳು ಸ್ವೀಕೃತವಾಗುತ್ತಿರುತ್ತವೆ.

ಆದ್ಯತಾ ಪಡಿತರ ಚೀಟಿಯನ್ನು ಕೋರಿ ಅರ್ಜಿ ಸಲ್ಲಿಸಿದವರಲ್ಲಿ ಗಂಭೀರ ಖಾಯಿಲೆಗಳಿಂದ ಬಳಲುತ್ತಿರುವವರಿಗೆ ಆದ್ಯತಾ ಪಡಿತರ ಚೀಟಿಯನ್ನು ಪಡೆಯಲು ಅರ್ಜಿದಾರರು ಅರ್ಹರೇ ಎಂದು ಪರಿಶೀಲಿಸಿದ ನಂತರ ಆದ್ಯತೆ ಮೇರೆಗೆ ಆದ್ಯತಾ ಪಡಿತರ ಚೀಟಿ ವಿತರಿಸುವ ಕಾರ್ಯ ಜಾರಿಯಲ್ಲಿರುತ್ತದೆ. ಆಗಸ್ಟ್-2022 ರಿಂದ ನವೆಂಬರ್-2022 ರವರೆಗೆ ಒಟ್ಟು 2537 ಅರ್ಜಿದಾರರಿಗೆ ವೈದ್ಯಕೀಯ ತುರ್ತು ಚಿಕಿತ್ಸೆಗೆ ಸಂಬಂಧಿಸಿದಂತೆ ಪಡಿತರ ಚೀಟಿಯನ್ನು ವಿತರಿಸಲಾಗಿದೆ.

ಆಹಾರಧಾನ್ಯಗಳ ವಿತರಣೆ, ಹೊಸ ಪಡಿತರ ಚೀಟಿಗಳ ಅನುಮೋದನೆ, ಪಡಿತರ ಚೀಟಿಗಳ ತಿದ್ದುಪಡಿ ಇಂತಹ ಕಾರ್ಯಗಳು ಏಕಕಾಲದಲ್ಲಿ ನಿರ್ವಹಿಸಿದಾಗ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಹಾರ ತಂತ್ರಾಂಶದ ಮೇಲೆ ಹೆಚ್ಚಿನ ಒತ್ತಡ ಉಂಟಾಗುತ್ತಿದ್ದು, ಸರ್ವರ್ ಕಾರ್ಯಕ್ಷಮತೆಯಲ್ಲಿ ವಿಳಂಬವಾಗುತ್ತಿರುವ ಕಾರಣ ಹೊಸ ಸರ್ವರ್‌ಗಳನ್ನು ಅಳವಡಿಸಲು ಕ್ರಮವಹಿಸಲಾಗಿದ್ದು, ಸರ್ವರ್‌ಗಳ ಖರೀದಿ ಕಾರ್ಯ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

ಅನಾಸ 36 ಡಿಆರ್‌ಎ 2023 (ಇ-ಆಫೀಸ್)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ